ಆಗಲೀ ಅಥವಾ ಬಂದನ್ನೇ ಆಗಲೀ ಆಚರಿಸುವ ದಾರಿಯನ್ನು ಹಿಡಿಯಬಾರದು. ಸರ್ಕಾರ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಆಲೋಚಿಸಿ ತಕ್ಷಣ ಒಂದು ಸಭೆಯನ್ನು ನಾನು ಕರೆಯುತ್ತೇನೆ. ಬಾಗಲಕೋಟೆಯ ಆಯುಕ್ತರು ಮತ್ತು ಸಂಬಂಧಪಟ್ಟ ಅಧಿಕಾರಿಗಳು, ಶಾಸಕರು ಮತ್ತು ಸಂಬಂಧಪಟ್ಟ ಮುಖಂಡರುಗಳನ್ನು ಸಹ ತಕ್ಷಣದಲ್ಲಿಯೇ ಕರೆಸಿ ಈ ಎಲ್ಲಾ ಬೇಡಿಕೆಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ ಬಹುಶಃ ಒಂದು ಪರಿಹಾರವನ್ನು ಕಂಡು ಹಿಡಿಯುತ್ತೇನೆ ಎನ್ನುವಂತಹ ಒಂದು ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತೇನೆ.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ :— ಪರಿಸ್ಥಿತಿ ಕೈ ಮೀರುವಂತಹ ಸಂದರ್ಭ ಅಲ್ಲಿ ಹೆಚ್ಚು ಇರುವ ಕಾರಣಕ್ಕಾಗಿ ಮಾನ್ಯ ಮಂತ್ರಿಗಳು ದಿನಾಂಕವನ್ನು ಗುರುತು ಮಾಡಬೇಕು.

ಅಧ್ಯಕ್ಷರು :— ಕೈ ಮೀರುವುದಿಲ್ಲ, ಮಾನ್ಯ ಸಿಂಧ್ಯಾರವರು ಇದ್ದಾರೆ.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ :— ಯಾವುದಾದರೂ ಒಂದು ದಿನಾಂಕವನ್ನು ಗುರುತು ಮಾಡಿ ಹೇಳಿದರೆ ಒಳ್ಳೆಯದಾಗಬಹುದು. ಪರಿಸ್ಥಿತಿ ಕೈ ಮೀರುವ ಸಂದರ್ಭ ಇದೆ.

ಶ್ರೀ ಬಿ. ಸೋಮಶೇಖರ್ :— ಆದಷ್ಟು ಶೀಘ್ರವಾಗಿ ಒಂದು ವಾರದೊಳಗೆ ಸಭೆ ಕರೆಯುತ್ತೇನೆ.

(ಕ) ಗದಗ್ ನಗರದಲ್ಲಿ ಕಳ್ಳರನ್ನು ಹಿಡಿಯಲು ಹೋಗಿ ಚೂರಿ ಇರಿತಕ್ಕೆ ಒಳಗಾಗಿ ಸತ್ತ ಕುಟುಂಬದವರಿಗೆ ಪರಿಹಾರ.

ಶ್ರೀ ಡಿ.ಆರ್. ಪಾಟೀಲ್ (ಗದಗ್) :— ಮಾನ್ಯ ಅಧ್ಯಕ್ಷರೆ, ಗದಗ್ ನಗರದೊಳಗೆ ಒಂದು ವರ್ಷದ ಹಿಂದೆ ನಡೆದಂತಹ ಒಂದು ಕಳುವಿನ ಪ್ರಸಂಗದೊಳಗೆ ಕಳ್ಳನನ್ನು ಹಿಡಿಯಲು ಹೋಗಿ ಬಸವರಾಜ್ ಹುಮ್ಮತ್ತಿ ಎನ್ನುವ ಒಬ್ಬ ಯುವಕ, ಅವರ ಚೂರಿ ಇರಿತಕ್ಕೆ ಒಳಗಾಗಿ ಸತ್ತ. ಅವನಿಗೆ ಪರಿಹಾರಕೊಡಬೇಕು ಎಂದು ಹೇಳಿ ಆಗಿನ ಗೃಹ ಸಚಿವರನ್ನು ನಾನು ಒತ್ತಾಯಿಸಿದಾಗ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವುದಾಗಿ ಈ ಸದನದಲ್ಲಿ ಭರವಸೆ ನೀಡಿದ್ದಾರೆ. ಆ ಭರವಸೆ ನೀಡಿ ಹತ್ತು ತಿಂಗಳ ಮೇಲಾಯಿತು. ಮೊನ್ನೆ ಅವನ ವಾರ್ಷಿಕ ತಿಥಿ ಆಯಿತು. ದಯವಿಟ್ಟು ಆ ಭರವಸೆಯನ್ನು ಕೂಡಲೇ ಈಡೇರಿಸಿ ಆ ಪರಿಹಾರ ಅವರಿಗೆ ದೊರಕುವಂತೆ ತಾವು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಪರಿಹಾರ ಇಲ್ಲ. ಆದರೂ ಅವರು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಟ್ಟಿದ್ದಾರೆ

ಎಂದು ನಾನು ಕೇಳಿದ್ದೇನೆ. ಮೊನ್ನೆಯ ದಿವಸ ನಾನು ಹೋಗಿದ್ದಾಗ ಮಾನ್ಯ ಡಿ.ಆರ್. ಪಾಟೀಲ್ ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಏನಾದರೂ ಸಹಾಯ ಮಾಡಲಿಕ್ಕೆ ಆದರೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ :— ಪರಿಹಾರ ಕೊಡುವುದಾಗಿ ಈ ಸದನದೊಳಗೆ ಭರವಸೆ ಕೊಟ್ಟಿದ್ದಾರೆ. ಪರಿಶೀಲನೆಯಲ್ಲ. ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತೇವೆ ಮತ್ತು ಅವರಿಗೆ ಏನಾದರೂ ಒಂದು ಶೌರ್ಯ ಪ್ರಶಸ್ತಿ ಕೊಡುತ್ತೇವೆಂದು ಇಲ್ಲಿ ಹೇಳಿದ್ದಾರೆ.

(ಖ) ಗೋದಾವರಿ ವ್ಯಾಲಿಯಲ್ಲಿ ಹೊಸ ಯೋಜನೆಗಳ ನಿರ್ಮಾಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಸನ್ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಗೆ ಸನ್ಮಾನ್ಯ ಮಂತ್ರಿಗಳು ಇಲ್ಲ. ಆದ್ದರಿಂದ ಬೇರೆ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು :— ಸರ್ಕಾರದ ಪರವಾಗಿ ಶೂನ್ಯ ವೇಳೆಯಲ್ಲಿ ಯಾರಾದರೂ ಉತ್ತರ ಕೊಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇದು ಬಹಳ ಗಂಭೀರವಾದಂತಹ ವಿಚಾರ ಇದೆ.

ಅಧ್ಯಕ್ಷರು :— ಎಷ್ಟು ಗಂಭೀರವಾದ ವಿಚಾರ ಇದೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸ್ಥಮೆಗೆ ಕೊಟ್ಟಂತಹ ಜಾಗದ ವಿಚಾರ. ಇದನ್ನು ಮೂರು ದಿವಸಗಳ ಹಿಂದೆ ಪ್ರಸ್ತಾಪ ಮಾಡಲು ಅವಕಾಶ ಕೋರಿದ್ದೇನೆ.

ಅಧ್ಯಕ್ಷರು :— ನೀವು ಪ್ರಸ್ತಾಪ ಮಾಡಿ. ನಿಮಗೆ ಎರಡು ಚಾನ್ಸ್. ಶ್ರೀರಾಮರೆಡ್ಡಿಗೆ ಒಂದು ಮಾರ್ಕಿಸ್ಟ್ ಪಾರ್ಟಿಗೆ ಇನ್ನೊಂದು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಅಧ್ಯಕ್ಷರೆ, 28ನೇ ತಾರೀಖು ಆಂಧ್ರದ ನೀರಾವರಿ ಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಮೆಮೋರ್ಯಾಂಡಮ್ ಅನ್ನು ಕೊಟ್ಟು ಗೋದಾವರಿ ವ್ಯಾಲಿಯಲ್ಲಿ ಹೊಸ ಯೋಜನೆಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಗೋದಾವರಿ, ಕೃಷ್ಣಾ ವ್ಯಾಲಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಗೋದಾವರಿ ಡೈವರ್ಷನ್‌ನಲ್ಲಿ ನಮಗೆ 26 ಟಿಎಂಸಿ ನೀರು ಬರಬೇಕಾಗಿರತಕ್ಕ ಕಾರಣಕ್ಕೋಸ್ಕರ ಈಗೇನು ಆಂಧ್ರ ಸರ್ಕಾರ ಪ್ರಧಾನ ಮಂತ್ರಿಗಳಿಗೆ ಮೆಮೋರ್ಯಾಂಡಮ್ ಕೊಟ್ಟಿದೆ. ಅದರಲ್ಲಿ ಎರಡು ಹೊಸ ಪ್ರಾಜೆಕ್ಟ್ ಮತ್ತು ಎರಡು ಹಳೆಯ ಪ್ರಾಜೆಕ್ಟ್ ನವೀಕರಣ ಮಾಡತಕ್ಕ ಪ್ರಶ್ನೆ ಇದೆ. ಮಾನ್ಯ ನೀರಾವರಿ ಸಚಿವರು ಅದರ ಬಗ್ಗೆ ಏನು ಹೇಳುತ್ತಾರೆ? ಸರ್ಕಾರ ಅದರ ಬಗ್ಗೆ ಒಂದು ನಿಲುವನ್ನು ಸ್ಪಷ್ಟ ಮಾಡಬೇಕು ಎಂದು ಹೇಳುತ್ತಿದ್ದೇನೆ. ಏಕೆಂದರೆ ಇದು ಬಹಳ ಗಂಭೀರವಾದಂತಹ ವಿಚಾರ.